ಚರಣಗಳನ್ನು ಬರೆದಿದ್ದಾರೆ. ಜಗತ್ತಿನಲ್ಲಿ ಇರಾನಿನ ಕೀರ್ತಿ ಉಳಿದಿರುವುದು ಅದನ್ನಾಳಿದ ದೊರೆಗಳಿಂದಲ್ಲ. ಕವಿಗಳಿಂದ, ದಾರ್ಶನಿಕರಿಂದ. ಶ್ರೇಷ್ಠ ಸಿನಿಮಾ ನಿರ್ದೇಶಕ ಮಜೀದ್ ಮಜೀದಿ ಅಂತಹವರಿಂದ. ಮಜೀದನ 'ಚಿಲ್ಡ್ರನ್ ಆಫ್ ದಿ ಹೆವೆನ್' ಸಿನಿಮಾ ಒಂದು ಅಪೂರ್ವ ಸೃಷ್ಟಿ. ಅಲ್ಲಿನ ಮಕ್ಕಳ ಅಭಿನಯವು ಮನಸ್ಸನ್ನು ಆರ್ದ್ರಗೊಳಿಸುತ್ತದೆ.

ಇರಾನಿನಲ್ಲಿ ವಿಶಾಲವಾದ ಮರುಭೂಮಿಗಳಿವೆ ನಿಜ. ನಾವು ತೆಹರಾನಿನಿಂದ ಖೋಂ ನಗರಕ್ಕೆ ಶುಷ್ಕವಾದ ಮರುಭೂಮಿಯೊಳಗೆ ಪ್ರಯಣ ಮಾಡಿದೆವು. ಆದರೂ ಇರಾನಿನ ಭೌಗೋಳಿಕತೆ ವೈವಿಧ್ಯಮಯವಾಗಿದೆ. ಅಲ್ಲಿರುವ ಹೊಲಗಳಲ್ಲಿ ಪೈರುಪಚ್ಚೆ, ಖರ್ಜೂರ ದ್ರಾಕ್ಷಿ ದಾಳಿಂಬೆ ತೋಟ, ಸರೋವರ, ನೀರ್ಗಾಲುವೆ, ಹಿಮಶಿಖರಗಳಿವೆ. ಕೊಳಗಳು ಜೌಗುಪ್ರದೇಶದ ಸುತ್ತ ಬೆಳೆದ ಹುಲ್ಲು ಮೇಯುವ ಹಲವಾರು ಒಂಟೆಗಳು ನಮಗೆ ಕಂಡವು. ನಮಗೆ ಹಾದಿಯಲ್ಲಿ ಕುದುರೆ ಕುರಿಗಳ ಹಿಂಡುಗಳು, ಹಳ್ಳಿಯಿಂದ ಪೇಟೆಗೆ ಹೋಗುವ ಶಾಲಾಮಕ್ಕಳು ಎದುರಾಗುತ್ತಿದ್ದವು. ಇರಾನಿನ ಜನಪ್ರಿಯ ಕ್ರೀಡೆ ಫುಟ್‌ಬಾಲ್. ಮಕ್ಕಳು ಸಣ್ಣಸಣ್ಣ ಮೈದಾನಗಳಲ್ಲಿ ಆಡುತ್ತಿದ್ದರು. ಎರೆಜಮೀನಿನಲ್ಲಿ ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ಒಯ್ಯಲು ರೈತರು, ಪಿಕಪ್ ವ್ಯಾನುಗಳಲ್ಲಿ ಲೋಡ್ ಮಾಡುವುದನ್ನು ನೋಡಬಹುದಿತ್ತು. ಸೂಫಿ ಬಯಾಜಿದನಿಂದ ಖ್ಯಾತವಾಗಿರುವ ಬಸ್ತಾಮ್ ಮರುಭೂಮಿ ಬೆಟ್ಟಗಳ ಬದಿಯಲ್ಲೇ ರೂಪುಗೊಂಡ ಸಸ್ಯಶಾಮಲ ನಗರ. ಪ್ರತಿ ದೇಶವೂ ತನ್ನ ಹವಾಮಾನ ಭೂಗುಣಗಳ ಒಳಗೆ ತನ್ನ ಸಂಸ್ಕೃತಿ ಪರಂಪರೆ ಬದುಕು ಆಲೋಚನಾಕ್ರಮ ಕಟ್ಟಿಕೊಂಡಿರುತ್ತದೆ. ಆಲೋಚನಾಕ್ರಮ ತಿಳಿಯಲು ಜನರೊಡನೆ ಬೆರೆತು ಮಾತುಕತೆ ಮಾಡಬೇಕು. ಆದರೆ ನಮಗೆ ಫಾರಸಿ ಬಾರದು. ಆದರೆ ಭಾರತೀಯರಿಗೆ ಇರಾನಿನಲ್ಲಿ ಬಹಳ ಗೌರವವಿದೆ. ಅವರು ಭಾರತದ ಬಗ್ಗೆ ಆಪ್ತವಾದ ಮಾತುಗಳನ್ನು ಆಡಿದರು. ಮಹಾತ್ಮ ಗಾಂಧಿಯ ಚಿತ್ರವಿರುವ ನೋಟನ್ನು ಇಟ್ಟುಕೊಳ್ಳಲು ನಮ್ಮಿಂದ ಪಡೆದರು. ತೆಹರಾನಿನಲ್ಲಿ ಗಾಂಧಿಯ ಹೆಸರಲ್ಲಿ ಬಹಳ ದೊಡ್ಡ ಸರ್ಕಾರಿ ಆಸ್ಪತ್ರೆಯಿದೆ.


ಇರಾನಿ ವಾಸ್ತುಶಿಲ್ಪ

ನಾನು, ಬಾನು ಇರಾನಿನ ಮ್ಯೂಸಿಯಂಗಳಲ್ಲಿ ಬಹಳ ಸಮಯ ಕಳೆದೆವು. ಅಲ್ಲಿ ಪ್ರಾಚೀನ ಪರ್ಶಿಯಾದ ಬೇಸಾಯ, ಕರಕುಶಲಕಲೆ, ಜನರ ಉಡುಗೆ ತೊಡುಗೆಗಳಿದ್ದವು. ಅಲ್ಲಿದ್ದ ಮಹಿಳೆಯರ ಆಭರಣಗಳು ಭಾರತದ ಅಲೆಮಾರಿ ಸಮುದಾಯಗಳ ಆಭರಣಗಳನ್ನು ನೆನಪಿಸಿದವು. ಇರಾನಿನಲ್ಲಿ ಬೇರೆಬೇರೆ ಬುಡಕಟ್ಟುಗಳಿವೆ. ಕುರ್ದಿಶ್, ಪಶ್ತೂನಿ ಇತ್ಯಾದಿ. ಈಗ ಪಾರಂಪರಿಕ ವೇಷಗಳು ಇವೆಯೊ ಇಲ್ಲವೊ ತಿಳಿಯದು. ಆದರೆ ಮುಖ ಕಾಣಿಸುವಂತೆ ಮೈಮುಚ್ಚುವ ಬುರಖಾಧಾರಿ ಮಹಿಳೆಯರೇ ಹೆಚ್ಚಿದ್ದರು. ತೆಹರಾನಿನಲ್ಲಿ ಕೇವಲ ತಲೆಗವಸು ಧರಿಸಿದ ಆಧುನಿಕ ಮಹಿಳೆಯರು ಇದ್ದರು. ಮಹಿಳೆಯರು ವಿಮಾನ ನಿಲ್ದಾಣಗಳಲ್ಲಿ, ಸರ್ಕಾರಿ ದಫ್ತರುಗಳಲ್ಲಿ, ಹೋಟೆಲುಗಳಲ್ಲಿ ಕೆಲಸ ಮಾಡುತ್ತಿದ್ದರು. ಬಸ್ತಾಮಿನ ನಮ್ಮ ಹೋಟೆಲಿನ ಒಡತಿ ಸುಂದರವಾದ ಮಧ್ಯವಯಸ್ಕ ಮಹಿಳೆಯಾಗಿದ್ದಳು. ಒಬ್ಬ ಬಿಚ್ಚುಗೂದಲಿನ ಜೀನ್ಸ್ ಪ್ಯಾಂಟ್ ಧರಿಸಿದ ಹುಡುಗಿಯನ್ನು ತೋರಿಸುತ್ತ, ನಮ್ಮ ಗೈಡ್ ತಾತ್ಸಾರದಿಂದ ಹೇಳಿದನು: 'ನೋಡಿ, ಇವರೇ ಇರಾನ್ ಅಮೆರಿಕ ಆಗಬೇಕೆಂದು ಬಯಸುವವರು'. ಮಹಿಳೆಯರ ಸ್ವಾತಂತ್ರ್ಯದ ವಿಷಯದಲ್ಲಿ ಇರಾನಿಗರಲ್ಲಿ ಆಳವಾದ ಭಿನ್ನಮತಗಳಿದ್ದಂತೆ ತೋರಿತು.

ಇರಾನಿನಲ್ಲಿ ಅಮೆರಿಕ ಹಾಗೂ ಇಸ್ರೇಲುಗಳ ಮೇಲೆ ವೈರತ್ವದ ಭಾವವಿತ್ತು. ಅನೇಕ ಕಡೆ ಈ ದೇಶಗಳ ಧ್ವಜಗಳನ್ನು ರಸ್ತೆಯ ಮೇಲೆ ಬರೆದಿದ್ದು, ಅದರ ಮೇಲೆ ಪಾದಚಾರಿಗಳು ನಡೆದು ಹೋಗುವಂತೆ ಮಾಡಲಾಗಿತ್ತು. ಅಮೆರಿಕವು ವಿಧಿಸಿದ ನಿರ್ಬಂಧಗಳ ಬಗ್ಗೆ ಜನರಲ್ಲಿ ಕೋಪವಿತ್ತು. ಚರಿತ್ರೆಯ ಒತ್ತಡಗಳು ಕೆಲವೊಮ್ಮೆ ವ್ಯಕ್ತಿಗಳಿಗೆ ದೇಶಗಳಿಗೆ ಅವುಗಳ ವಿಕಸನದ ಸಹಜಲಯವನ್ನು ಭಗ್ನಗೊಳಿಸಿ ಮತ್ತೆಲ್ಲೋ ಶಕ್ತಿಪಾತವಾಗುವಂತೆ ಮಾಡುತ್ತವೆ ಅನಿಸುತ್ತದೆ. ಇರಾನಿನ ಸೈನಿಕ ಶಕ್ತಿ ಬಲಿಷ್ಠ ಮಾತ್ರವಲ್ಲ, ನಾಡಿಗಾಗಿ ತಮ್ಮನ್ನು ಬಲಿಗೊಡಲು ಬೇಕಾದ ಕೆಚ್ಚು ಅವರಲ್ಲಿದೆ. ಇದಕ್ಕೆ ಕಾರಣ ಶಿಯಾಗಳಾದ ಅವರದು ಹುತಾತ್ಮರನ್ನು ಆರಾಧಿಸುವ ಸಂಸ್ಕೃತಿ. ಹಜರತಲಿ ಹಸನ್ ಹುಸೇನ್ ಒಳಗೊಂಡಂತೆ ಅವರ ಎಲ್ಲ ಆಧ್ಯಾತ್ಮಿಕ ನಾಯಕರು ಹುತಾತ್ಮರಾದವರು. ಅವರ ಚಿತ್ರಪಟಗಳು ಎಲ್ಲೆಲ್ಲೂ ಇದ್ದವು. ಇವುಗಳ ಜತೆ ಅಮೆರಿಕ ಇಸ್ರೇಲ್ ಇರಾಕ್ ಯುದ್ಧಗಳಲ್ಲಿ ಮಡಿದ ಸೈನಿಕರ ಪಟಗಳನ್ನೂ ಕಾಣಬಹುದಿತ್ತು.

ಇರಾನಿನ ಪ್ರಾಚೀನ ಹೆಸರು ಪರ್ಶಿಯಾ. ಅದರ ಭಾಷೆಯ ಹೆಸರು ಫಾರಸಿ. ಒಂದು ಕಾಲಕ್ಕೆ ಅಗ್ನಿಯಾರಾಧಕ ಸಂಸ್ಕೃತಿಯ ನಾಡು. ಮುಂದೆ ಅಲ್ಲಿಗೆ ಇಸ್ಲಾಂ ಸ್ವೀಕರಿಸಿತು. ಆದರೂ ತನ್ನ ಪೂರ್ವದ ಪರಂಪರೆಯನ್ನು ಅದು ಪೂರ್ಣ ಬಿಟ್ಟುಕೊಡಲಿಲ್ಲ. ಹೋಟೆಲುಗಳಲ್ಲಿ ಇಸ್ಲಾಂಪೂರ್ವ ಪರ್ಶಿಯಾದ ಅಗ್ನಿಸಂಸ್ಕೃತಿಯ ದೊರೆ ಸೈರಸ್ಸನ ಚಿತ್ರಪಟಗಳಿದ್ದವು. ಇರಾನಿಗರಿಗೆ ತಮ್ಮ ಪೂರ್ವಪರಂಪರೆಯ ಬಗ್ಗೆ ಅಭಿಮಾನವಿದೆ. ಹೀಗಾಗಿಯೇ ಅಲ್ಲಿನದು ಅರಬರ ಇಸ್ಲಾಮಲ್ಲ. ವಿಶಿಷ್ಟವಾದ ಶಿಯಾ ಇಸ್ಲಾಂ. ಶಿಯಾಗಳು


ಅಂಗಡಿಗಳಲ್ಲಿ ಕೇಸರಿಯ ಪರಾಗ